## ಹೋಮ್ ಐಸೋಲೇಶನ್ ಪಾಲನೆಗೆ ಕ್ರಮ | ವಿತರಣೆಗೆ 30ಕ್ಕೂ ಹೆಚ್ಚು ವಾಹನ ಸಿದ್ಧ

# ಸೋಂಕಿತರ ಮನೆ ಬಾಗಿಲಿಗೆ ಔಷಧ ಕಿಟ್

**ಧಾರವಾಡ:** ಕೋವಿಡ್ ಪೀಡಿತರಾಗಿ ಹೋಮ್ ಐಸೋಲೇಶನ್‌ನಲ್ಲಿರುವ ಸೋಂಕಿತರಿಗೆ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ 'ಸೋಂಕಿತರ ಮನೆ ಬಾಗಿಲಿಗೆ ಔಷಧ ಕಿಟ್' ವಿತರಣೆ ಆರಂಭಿಸಿದೆ.

ಕೋವಿಡ್ ಸೋಂಕಿತ ವ್ಯಕ್ತಿ ಸಾರ್ವಜನಿಕವಾಗಿ ಸಂಚರಿಸುವುದು ಮತ್ತು ಇತರರಿಗೆ ಹರಡುವುದನ್ನು ತಪ್ಪಿಸಲು ಇದನ್ನು ಜಾರಿಗೊಳಿಸಲಾಗಿದೆ. ಅವಳಿನಗರ ವ್ಯಾಪ್ತಿಯ ಕೋವಿಡ್ ಸೋಂಕಿತರು ಔಷಧ ಕಿಟ್ ಕೋರಿ ಕರೆ ಮಾಡಿದರೆ, ಸಂಬಂಧಿಸಿದ ವಲಯ ಕಚೇರಿ ಮೂಲಕ ಆಯಾ ವಾರ್ಡ್‌ನಲ್ಲಿರುವ ಸೋಂಕಿತರ ಮನೆ ಬಾಗಿಲಿಗೆ ಔಷಧ ತಲುಪಿಸಲಾಗುತ್ತಿದೆ. ಕಿಟ್ ವಿತರಣೆಗಾಗಿ 30ಕ್ಕೂ ಹೆಚ್ಚು ವಾಹನಗಳನ್ನು ಸಿದ್ಧಗೊಳಿಸಲಾಗಿದೆ. ಪಾಲಿಕೆಯ ಪ್ರತಿ ವಲಯಕ್ಕೆ 2ರಿಂದ 3 ವಾಹನ ನೀಡಲಾಗಿದೆ. ಪ್ರತಿ ತಂಡದಲ್ಲಿ ಹೆಲ್ತ್ ಇನ್‌ಸ್ಪೆಕ್ಟರ್, ಬಿಲ್ ಕಲೆಕ್ಟರ್ ಮತ್ತು ಆರೋಗ್ಯ ಸಿಬ್ಬಂದಿ ಇದ್ದಾರೆ. ಸೋಂಕಿತರ ಆರೋಗ್ಯ ವಿಚಾರಿಸುವ ತಂಡ, ಹೋಮ್ ಐಸೋಲೇಶನ್ ಮಾರ್ಗಸೂಚಿಗಳನ್ನು ವಿವರಿಸಿ, ಆಪ್ತ ಸಮಾಲೋಚನೆ ಮೂಲಕ ಧೈರ್ಯ ತುಂಬುತ್ತಿದೆ. ಜೊತೆಗೆ ಸೋಂಕಿತರ ಮನೆ ಬಾಗಿಲಿಗೆ 'ನಾವೀಗ ಗೃಹ ಕ್ವಾರಂಟೈನ್‌ನಲ್ಲಿ ಇದ್ದೇವೆ' ಎಂಬ ಫಲಕ ಅಳವಡಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲೂ ಆಯಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲೂಕು ಆಸ್ಪತ್ರೆಗಳಿಂದ ಔಷಧ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ನಗರ ಹಾಗೂ ಗ್ರಾಮೀಣ ಸೇರಿ ಇದುವರೆಗೆ 7730 ಔಷಧ ಕಿಟ್‌ಗಳನ್ನು ವಿತರಿಸಲಾಗಿದೆ.

### ಕಣವಿ ಕೋವಿಡ್ ವರದಿ ನೆಗೆಟಿವ್

**ಕವಿ ಡಾ.ಚೆನ್ನವೀರ ಕಣವಿ ಅವರ ಕೋವಿಡ್ ವರದಿ ನೆಗೆಟಿವ್ ಬಂದಿದೆ. ಅವರನ್ನು ನಾನ್ ಕೋವಿಡ್ ಐಸಿಯುಗೆ ಸ್ಥಳಾಂತರಿಸಲಾಗಿದೆ. ಕೃತಕ ಉಸಿರಾಟದ ವ್ಯವಸ್ಥೆಯನ್ನು ಮಾಡಲಾಗಿದೆ. ಆರೋಗ್ಯ ಕ್ಷೀಣವಾಗಿದ್ದು, ಚಿಕಿತ್ಸೆ ಮುಂದುವರಿದಿದೆ.**


ವಿಜಯವಾಣಿ ಚಿತ್ರ

ಧಾರವಾಡ ನಗರ ವ್ಯಾಪ್ತಿಯ ಮನೆಯೊಂದಕ್ಕೆ ಗೃಹ ಕ್ವಾರಂಟೈನ್ ಫಲಕ ಅಳವಡಿಸುತ್ತಿರುವ ಆರೋಗ್ಯ ಸಿಬ್ಬಂದಿ.

### ಮಕ್ಕಳಿಗಾಗಿ ವಿಶೇಷ ತಂಡ

**ಕೋವಿಡ್ 3ನೇ ಅಲೆ ಮಕ್ಕಳನ್ನು ಬಾಧಿಸುತ್ತಿದ್ದು, ಅಂಥವರಿಗೂ ಅಗತ್ಯ ಚಿಕಿತ್ಸೆ, ಔಷಧ ನೀಡಿ ಅವರನ್ನು ಗುಣಮುಖರನ್ನಾಗಿ ಮಾಡಲಾಗಿದೆ. ಮಕ್ಕಳ ವೈದ್ಯರನ್ನೊಳಗೊಂಡ 7 ತಂಡಗಳು ಕಾರ್ಯನಿರ್ವಹಿಸುತ್ತಿವೆ ಎಂದು ಜಿಲ್ಲಾಧಿಕಾರಿ ನಿತೇಶ ಪಾಟೀಲ ತಿಳಿಸಿದ್ದಾರೆ.**

### ಪಾಲಿಕೆಯಿಂದ ಸಹಾಯವಾಣಿ

**ಸೋಂಕಿತರಿಗೆ ಔಷಧ ಕಿಟ್ ಪಡೆಯಲು ಮಹಾನಗರ ಪಾಲಿಕೆಯಲ್ಲಿ ತೆರೆಯಲಾದ ಸಹಾಯವಾಣಿ ಸಂಖ್ಯೆ 0836- 2213803 ಹಾಗೂ 0836- 2213806 ಮತ್ತು ಮೊ: 9141051611ಗೆ ಕರೆ ಮಾಡಬಹುದು. ಇದು ದಿನದ 24 ಗಂಟೆ ಕಾರ್ಯನಿರ್ವಹಿಸುತ್ತದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಡಾ. ಬಿ. ಗೋಪಾಲಕೃಷ್ಣ ತಿಳಿಸಿದ್ದಾರೆ.**

## ಕಿಮ್ಸ್‌ಗೆ ವೈದ್ಯಕೀಯ ಪರಿಕರ ಹಸ್ತಾಂತರ




**ಹುಬ್ಬಳ್ಳಿ:** ತುರ್ತು ಆರೋಗ್ಯ ಸೇವೆಗಳ ಮೂಲ ಸೌಕರ್ಯ ಹೆಚ್ಚಿಸುವುದಕ್ಕಾಗಿ ನಗರದ ಕಿಮ್ಸ್ ಆಸ್ಪತ್ರೆಗೆ ಎಡಿಎಂ ಆಗ್ರೋ ವತಿಯಿಂದ 38 ಲಕ್ಷ ರೂ.ಗೂ ಹೆಚ್ಚಿನ ಮೌಲ್ಯದ ವಿಶ್ವ ದರ್ಜೆಯ ವೈದ್ಯಕೀಯ ಪರಿಕರಗಳನ್ನು ಒದಗಿಸಲಾಯಿತು.

ದೇಶಪಾಂಡೆ ಪ್ರತಿಷ್ಠಾನದ ನೇತೃತ್ವದಲ್ಲಿ ಕಿಮ್ಸ್ ಆಸ್ಪತ್ರೆಯ ಆಡಳಿತ ವಿಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೋವಿಡ್ ಮತ್ತು ಇತರ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ಅಗತ್ಯವಿರುವ 22 ಲಕ್ಷ ರೂ. ಮೌಲ್ಯದ 1 ಅನಸ್ತೇಷಿಯಾ ವರ್ಕ್ ಸ್ಟೇಷನ್, ತಲಾ 1.8 ಲಕ್ಷ ರೂ. ಮೌಲ್ಯದ 8 ನವಜಾತ ಶಿಶುಗಳ ಸುರಕ್ಷತೆಗಾಗಿ ನಿಯೋನೆಟಲ್ ವಾರ್ಮರ್‌ಗಳು ಹಾಗೂ ತಲಾ 6 ಸಾವಿರ ರೂ. ಮೌಲ್ಯದ 10 ವೈದ್ಯಕೀಯ ಉಪಕರಣಗಳ ಸೆಟ್‌ಗಳನ್ನು ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಹಾನಗರ ಪಾಲಿಕೆ ಆಯುಕ್ತ ಗೋಪಾಲಕೃಷ್ಣ ಬಿ., ಕಿಮ್ಸ್‌ಗೆ ದೊರಕಿರುವ ಅತ್ಯಾಧುನಿಕ ವೈದ್ಯಕೀಯ ಸಲಕರಣೆಯಿಂದ ರೋಗಿಗಳಿಗೆ ಇನ್ನಷ್ಟು ಉತ್ತಮ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ ಎಂದರು.

ಎಡಿಎಂ ಆಗ್ರೋದ ತಾಂತ್ರಿಕ ಸ್ಥಾವರದ ಮುಖ್ಯಸ್ಥ ಹೇಮಂತ ಕುಮಾರ ಸಾರಸ್ವತ್ ಮಾತನಾಡಿ, ಸಮಾಜವನ್ನು ಕೋವಿಡ್ ಮುಕ್ತಗೊಳಿಸುವ ಗುರಿಯೊಂದಿಗೆ ವೈದ್ಯಕೀಯ ಸಲಕರಣೆಗಳನ್ನು ನೀಡಲಾಗಿದೆ ಎಂದು ಹೇಳಿದರು. ದೇಶಪಾಂಡೆ ಪ್ರತಿಷ್ಠಾನದ ಸಿಇಒ ವಿವೇಕ ಪವಾರ ಹಾಗೂ ಕಿಮ್ಸ್‌ನ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ನಾರಾಯಣ ಹೆಬಸೂರ ಮಾತನಾಡಿದರು. ಎಡಿಎಂ ಆಗ್ರೋದ ವಾಣಿಜ್ಯ ವಿಭಾಗದ ಡೆಪ್ಯುಟಿ ಮ್ಯಾನೇಜರ್ ಶಶಾಂಕ ರೆಡ್ಡಿ, ಎಚ್‌ಆರ್ ಮ್ಯಾನೇಜರ್ ಅನೀಲಕುಮಾರ ತೇರದಾಳ, ದೇಶಪಾಂಡೆ ಸ್ಕಿಲ್ಲಿಂಗ್ ನ ಸಿಇಒ ಪಿ.ಎನ್. ನಾಯಕ, ಪ್ರತಿಷ್ಠಾನದ ಕಾರ್ಯಾನುಷ್ಠಾನ ವಿಭಾಗದ ಹಿರಿಯ ನಿರ್ದೇಶಕ ವಿಜಯ ಪುರೋಹಿತ ಇದ್ದರು.



ವಿಜಯವಾಣಿ ಚಿತ್ರ

ಎಡಿಎಂ ಆಗ್ರೋದಿಂದ ಕಿಮ್ಸ್‌ಗೆ ವೈದ್ಯಕೀಯ ಪರಿಕರ ಹಸ್ತಾಂತರಿಸುವ ಕಾರ್ಯಕ್ರಮದಲ್ಲಿ ಪಾಲಿಕೆ ಆಯುಕ್ತ ಗೋಪಾಲಕೃಷ್ಣ ಬಿ., ಎಡಿಎಂ ಆಗ್ರೋದ ಹೇಮಂತಕುಮಾರ ಸಾರಸ್ವತ್, ದೇಶಪಾಂಡೆ ಪ್ರತಿಷ್ಠಾನದ ಸಿಇಒ ವಿವೇಕ ಪವಾರ ಹಾಗೂ ಇತರರು ಇದ್ದರು.

